# ಉದ್ದನೆ ಕಾಲುಗಳ ಸೂರ್ಯನ ಕುದುರೆ



'ಸೂರ್ಯನ ಕುದುರೆ' ಯು.ಆರ್. ಅನಂತಮೂರ್ತಿ ಅವರ ಪ್ರಸಿದ್ಧ ಕಥೆ. ಸಾಹಿತ್ಯದಲ್ಲಿನ ಈ ರೂಪಕದ ಹಿಂದೆ ಬಿದ್ದರೆ ನಮಗೆ ಎಡತಾಕುವುದು ಒಂದು ಮಿಡತೆ!

■ ಜಿ.ಆರ್. ಪಂಡಿತ್, ಸಾಗರ

'ಸೂರ್ಯನ ಕುದುರೆ' ಎನ್ನುವುದು ಮಿಡತೆಯೊಂದರ ಹೆಸರು. ಸೂರ್ಯನ ರಥಕ್ಕೆ ಕಟ್ಟಿದ ಕೆನೆಯುವ ಕುದುರೆಯ ರೀತಿ ಉದ್ದ ಕಾಲುಗಳನ್ನು ಒಂದಿಷ್ಟು ಮಡಚಿ ಮುಂದಕ್ಕೆ ಚಾಚಿ, ಕತ್ತು ಮೇಲಕ್ಕೆತ್ತಿ ನಿಲ್ಲುವ ನಡವಳಿಕೆಯಿಂದಾಗಿ ಈ ಮಿಡತೆಗೆ 'ಸೂರ್ಯನ ಕುದುರೆ' ಎಂಬ ಹೆಸರು ಬಂದಿರಬೇಕು.

ಇಂಗ್ಲಿಷ್‌ನಲ್ಲಿ ಇದಕ್ಕೆ ಪ್ರೇಯಿಂಗ್ ಮ್ಯಾಂಟಿಸ್ (ಪ್ರಾರ್ಥನಾ ಮಿಡತೆ) ಎಂದು ಕರೆಯುತ್ತಾರೆ. ಮನುಷ್ಯನೊಬ್ಬ ದೇವರಿಗೆ ಸಾಷ್ಟಾಂಗ ನಮಸ್ಕಾರ ಹಾಕಿದ ರೀತಿ ಗಿಡಗಳ ಮೇಲೆ ಕುಳಿತುಕೊಳ್ಳುವ ಭಂಗಿಯಿಂದಾಗಿ ಈ ಹೆಸರೂ ಅದಕ್ಕೆ ಒಪ್ಪುತ್ತದೆ.

ಈ ಮಿಡತೆಗಳದು ವೈವಿಧ್ಯಮಯ ಪ್ರಪಂಚ. ಮ್ಯಾಂಟಿಡಿಯಾ ಕುಟುಂಬಕ್ಕೆ ಸೇರಿದ ಇವುಗಳಲ್ಲಿ ಸುಮಾರು 2400ಕ್ಕೂ ಹೆಚ್ಚಿನ ಜಾತಿಗಳಿವೆ. ಉಷ್ಣವಲಯದ ಮಳೆಕಾಡುಗಳಿಂದ ಹಿಡಿದು ಸಮಶೀತೋಷ್ಣ ಹುಲ್ಲುಗಾವಲುಗಳವರೆಗಿನ ವಿವಿಧ ರೀತಿಯ ಪರಿಸರ ವ್ಯವಸ್ಥೆಯಲ್ಲಿ ವಾಸಿಸುವ ಈ ಪ್ರಭೇದಗಳು ಗಾತ್ರ, ಬಣ್ಣ, ವಿಶಿಷ್ಟ ನೋಟ–ನಡವಳಿಕೆ ಮತ್ತು ಆವಾಸಸ್ಥಾನಗಳ ಆದ್ಯತೆಗಳಲ್ಲಿ ವ್ಯತ್ಯಾಸ ಹೊಂದಿವೆ. ಫ್ಲವರ್ ಮ್ಯಾಂಟಿಸ್, ಡೆವಿಲ್ ಮ್ಯಾಂಟಿಸ್, ಬಾರ್ಕ್ ಮ್ಯಾಂಟಿಸ್, ರೋಸ್ ಮ್ಯಾಂಟಿಸ್ ಹೀಗೆ ಅನೇಕ ಜಾತಿಯ ಮಿಡತೆಗಳನ್ನು ಕಾಣಬಹುದು.

ಸೂರ್ಯನ ಕುದುರೆ ಮಿಡತೆಗಳು ತಮ್ಮ ಇರುವಿಕೆಯನ್ನು ಮರೆಮಾಚಲು ಅನುಕೂಲವಾದ ಶರೀರ ಹೊಂದಿವೆ. ಅವುಗಳ ನಿಜ ಬಣ್ಣ, ಅಂಗಾಂಗಗಳ ಆಕಾರಗಳು ಗಿಡದ ಎಲೆಗಳನ್ನೋ, ಹೂವುಗಳನ್ನೋ ಹೋಲುವುದರಿಂದ



ಪರಭಕ್ಷಕಗಳಿಂದ ರಕ್ಷಣೆ ಪಡೆಯುತ್ತವೆ. ಈ ಬಣ್ಣ–ಶರೀರ ಅವುಗಳು ಬೇಟೆಯಾಡಲೂ ಅನುಕೂಲಕರ. ಈ ಕೀಟಗಳು ತಮ್ಮ ಆವಾಸಸ್ಥಾನಗಳಲ್ಲಿನ ಹೂವುಗಳ ನಿರ್ದಿಷ್ಟ ಬಣ್ಣ ಹಾಗೂ ನಡವಳಿಕೆಗಳನ್ನು ಅನುಸರಿಸುತ್ತವೆ. ಆ ವೇಷವೇ ಬೇಟೆಯಾಡಲು ಸಹಕಾರ ನೀಡುತ್ತದೆ. ತಂಗಾಳಿಯಲ್ಲಿ ಹೂವಿನಂತೆ ತೊನೆಯುತ್ತಾ ಇದ್ದು, ಕೀಟ ಹತ್ತಿರಕ್ಕೆ ಬಂದಾಗ ಮಿಂಚಿನ ವೇಗದಲ್ಲಿ ಮೇಲೆರಗಿ ತಮ್ಮ ಮುಳ್ಳು ಕಾಲುಗಳಿಂದ ಹಿಡಿದುಬಿಡುತ್ತವೆ.

ಇತರ ಮಿಡತೆಗಳಂತೆ ಪ್ರಾರ್ಥನಾ ಮಿಡತೆಗಳೂ ಮೊಟ್ಟೆ, ಎಳೆ ಹರೆಯದ ಮಿಡತೆ (ನಿಂಪ್ಸ್) ಮತ್ತು ವಯಸ್ಕ ಮಿಡತೆ ಎಂಬ ಮೂರು ಹಂತಗಳ ಜೈವಿಕ ರೂಪಾಂತರಕ್ಕೆ ಒಳಪಡುತ್ತವೆ. ಮಿಡತೆಗಳಿಗೆ ಒಟ್ಟು ಐದು ಕಣ್ಣುಗಳು. ಮುಂಭಾಗದ ಎರಡು ದೊಡ್ಡ ಕಣ್ಣು ಮತ್ತು ಒಸೆಲ್ಲಿ ಎಂದು ಕರೆಯಲಾಗುವ ಮೂರು ಸಣ್ಣ ಕಣ್ಣುಗಳನ್ನು ಹೊಂದಿರುತ್ತವೆ. ಇವು ಕೇವಲ ಬೆಳಕು ಮತ್ತು ಚಲನೆಯನ್ನು ಗ್ರಹಿಸುತ್ತವೆ. 60 ಅಡಿ ದೂರದ ಚಲನೆಯನ್ನೂ ಗುರುತಿಸಬಲ್ಲವು.

ಗಂಡಿನೊಂದಿಗೆ ಮಿಲನದ ನಂತರ ಹೆಣ್ಣು ಮಿಡತೆ ಶರತ್ಕಾಲದಲ್ಲಿ ಗಿಡದ ಎಲೆಗಳ ಹಿಂಭಾಗ ಅಥವಾ ಮರದ ತೊಗಟೆಗಳ ಮಧ್ಯೆ ನೂರಾರು ಮೊಟ್ಟೆಗಳನ್ನು 'ಒಥೆಕಾ' ಎಂಬ ರಕ್ಷಣಾತ್ಮಕ ವ್ಯವಸ್ಥೆಯಲ್ಲಿ ಸುರಕ್ಷಿತವಾಗಿಡುತ್ತದೆ. ಕೆಲವೊಮ್ಮೆ ಹೆಣ್ಣು, ಸಂಯೋಗದ ನಂತರ ಗಂಡು ಮಿಡತೆಯ ತಲೆಯನ್ನು ಕಚ್ಚಿ ಸಾಯಿಸಿ ತಿಂದುಬಿಡುತ್ತದೆ.

ವಸಂತಕಾಲದ ಕೊನೆ, ಅಂದರೆ ಬೇಸಿಗೆಯ ತಾಪಮಾನ ಏರುವ ಸಮಯದಲ್ಲಿ ಮೊಟ್ಟೆಗಳು ಒಡೆದು ಚಿಕಣಿ ಮಿಡತೆಗಳಾಗಿ ಹೊರಬರುತ್ತವೆ. ಗಂಡು ಮಿಡತೆಗಳು ಸುಮಾರು ಒಂದೂವರೆಯಿಂದ ನಾಲ್ಕು ಇಂಚಿನಷ್ಟು ಗಾತ್ರ ಹೊಂದಿರುತ್ತವೆ. ಹೆಣ್ಣು ಗಂಡಿಗಿಂತಲೂ ಗಾತ್ರದಲ್ಲಿ ದೊಡ್ಡದು.

ಸಣ್ಣ ಚಿಟ್ಟೆಗಳು, ನೊಣ, ಜೀರುಂಡೆಗಳು, ಗಿಡ ಹೇನುಗಳು, ಚಿಕ್ಕ ಕೀಟಗಳು ಇವುಗಳ ಆಹಾರ. ದೇಹದ ಮಧ್ಯ ಭಾಗವು ಕುತ್ತಿಗೆಯಂತೆ ಕಾಣುವಷ್ಟು ಉದ್ದ ಹಾಗೂ ತೆಳ್ಳಗೆ ಇರುತ್ತದೆ. ತಲೆ ಮತ್ತು ಎದೆಯ ನಡುವೆ ಮೆದುವಾದ ಬಾಗುವ ಕೀಲು ಹೊಂದಿದ್ದು, ತಲೆಯನ್ನು 180 ಡಿಗ್ರಿಗಳಷ್ಟು ತಿರುಗಿಸಲು ಅನುವು ಮಾಡಿಕೊಡುತ್ತದೆ. 180 ಡಿಗ್ರಿ ಕೋನದಲ್ಲಿ ಕತ್ತು ತಿರುಗಿಸಿ ನೋಡಬಲ್ಲ ಸಾಮರ್ಥ್ಯ ಹೊಂದಿರುವ ಏಕೈಕ ಅಕಶೇರುಕ ಕೀಟ.

ಇವು ವಿಷಕಾರಿ ಕೀಟಗಳಲ್ಲ. ಇವುಗಳ ಆಯಸ್ಸು ಹೆಚ್ಚೆಂದರೆ 12 ತಿಂಗಳು. ಕೀಟಗಳನ್ನು ತಿಂದು ಬದುಕುವುದರಿಂದ ಇವು ರೈತರಿಗೆ ಉಪಕಾರಿ.

ಪ್ರತಿಕ್ರಿಯಿಸಿ: feedback@sudha.co.in